# ವಸಾಹತು ಕಾಲಘಟ್ಟದ ಚಿತ್ರದುರ್ಗ ಜಿಲ್ಲೆಯಲ್ಲಿ ಮಿಷನರಿ ಶಾಲೆಗಳ ಪ್ರಭಾವ

**ಸಿದ್ದೇಶ ಕೆ.***

**DOI: https://doi.org/10.5281/zenodo.19501596**

**ABSTRACT**

ಭಾರತವು ವಸಾಹತುಶಾಹಿ ಆಳ್ವಿಕೆಗೆ ಒಳಗಾದ ನಂತರ ಇಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಶೈಕ್ಷಣಿಕ ವ್ಯವಸ್ಥೆಯನ್ನು ಬದಲಾಯಿಸುವಲ್ಲಿ ಬ್ರಿಟಿಷ್ ಆಡಳಿತವು ಮಹತ್ವದ ಪಾತ್ರವನ್ನು ವಹಿಸಿತ್ತು. ಅದರಲ್ಲೂ ಶಿಕ್ಷಣದ ಕ್ಷೇತ್ರದಲ್ಲಿನ ಗಮನಾರ್ಹ ಬದಲಾವಣೆಗೆ ಅವರು ಪರಿಚಯಿಸಿದ ಆಂಗ್ಲ ಭಾಷಾ ಶಿಕ್ಷಣವು ಪ್ರಮುಖ ಕಾರಣವಾಯಿತು. ಅಂತೆಯೇ ವಸಾಹತು ಕಾಲಘಟ್ಟದ ಚಿತ್ರದುರ್ಗ ಜಿಲ್ಲೆಯ ಸಂದರ್ಭದಲ್ಲಿ, ಮಿಷನರಿ ಶಾಲೆಗಳು ಪಾಶ್ಚಿಮಾತ್ಯ ಶಿಕ್ಷಣ, ಸಾಮಾಜಿಕ ಸುಧಾರಣೆ ಮತ್ತು ತಳಮಟ್ಟದ ಸಮುದಾಯಗಳಲ್ಲಿ ಜಾಗೃತಿಯ ಪ್ರಜ್ಞೆಯನ್ನು ಮೂಡಿಸುವಲ್ಲಿ ಕೊಡುಗೆ ನೀಡಿವೆ. ಈ ಲೇಖನವು ವಸಾಹತುಶಾಹಿ ಆಳ್ವಿಕೆಯಲ್ಲಿ ಜಿಲ್ಲೆಯಲ್ಲಿನ ಮಿಷನರಿ ಶಿಕ್ಷಣದ ಸ್ವರೂಪ, ಬೆಳವಣಿಗೆ ಮತ್ತು ಪ್ರಭಾವವನ್ನು ಪರಿಶೀಲಿಸುತ್ತದೆ. ಅಲ್ಲದೇ ಸಾಕ್ಷರತೆ, ಸಾಮಾಜಿಕ ಚಲನಶೀಲತೆ ಮತ್ತು ಸಾಂಸ್ಕೃತಿಕ ಬದಲಾವಣೆಯಲ್ಲಿ ಅದರ ಪಾತ್ರವನ್ನು ಕೇಂದ್ರೀಕರಿಸಿದೆ.

**KEYWORDS:** ವಸಾಹತುಶಾಹಿ ಶಿಕ್ಷಣ, ಕ್ರಿಶ್ಚಿಯನ್ ಮಿಷನರಿಗಳು, ಸಾಮಾಜಿಕ ಚಲನಶೀಲತೆ, ಮಹಿಳಾ ಸಬಲೀಕರಣ, ಚಿತ್ರದುರ್ಗದ ಇತಿಹಾಸ.

**ಪೀಠಿಕೆ:**

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ಆರಂಭವು ಇಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ಅಲ್ಲದೇ ಅವರು ಜಾರಿಗೆ ತಂದ ಶೈಕ್ಷಣಿಕ ಬದಲಾವಣೆಗಳು ಶಿಕ್ಷಣ ಕ್ಷೇತ್ರದಲ್ಲೂ ಸಹ ಗಮನಾರ್ಹವಾದ ಪರಿವರ್ತನೆಗಳನ್ನು ತಂದವು. 1835 ರಲ್ಲಿ ಜಾರಿಗೆ ತಂದ ಪಾಶ್ಚಾತ್ಯ ಶಿಕ್ಷಣ ಮಾದರಿಯನ್ನು ದೇಶಾದ್ಯಂತ ಅನುಷ್ಠಾನಗೊಳಿಸುವಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಪ್ರಮುಖ ಪಾತ್ರ ವಹಿಸಿದ್ದವು. ಅವರ ಚಟುವಟಿಕೆಗಳು ಕೇವಲ ಶಿಕ್ಷಣದ ಪ್ರಚಾರಕ್ಕೆ ಸೀಮಿತವಾಗಿರಲಿಲ್ಲ. ಅವುಗಳು ಸಾಮಾಜಿಕ ಸುಧಾರಣೆಯನ್ನು ಉತ್ತೇಜಿಸಲು ಪ್ರಯತ್ನಿಸಿದವು. ಜೊತೆಗೆ ಕ್ರೈಸ್ತ ಧರ್ಮದ ಪ್ರಚಾರ ಮತ್ತು ಮತಾಂತರಗಳಲ್ಲೂ ತೊಡಗಿದ್ದವು.

* **ಸಿದ್ದೇಶ ಕೆ.**, ಸಹಾಯಕ ಪ್ರಾಧ್ಯಾಪಕರು, ಶ್ರೀ ಬೆನಕಪ್ಪ ಶಂಕ್ರಪ್ಪ ಸಿಂಹಾಸನದ ಸರ್ಕಾರಿ ಪದವಿ ಕಾಲೇಜು, ಗಜೇಂದ್ರಗಡ.

**ಭೌಗೋಳಿಕ ಹಿನ್ನೆಲೆ:**

ಚಿತ್ರದುರ್ಗವು ಬೆಂಗಳೂರಿನ ವಾಯುವ್ಯ ದಿಕ್ಕಿನಲ್ಲಿ 200 ಕಿ.ಮೀ ಅಂತರದಲ್ಲಿದೆ. ಅವಿಭಜಿತ ಚಿತ್ರದುರ್ಗ ಜಿಲ್ಲೆಯು ಉತ್ತರ ಅಕ್ಷಾಂಶ 13o, 34o–15o, 02o ಮತ್ತು ಪೂರ್ವ ರೇಖಾಂಶ 75o 37o–77o 01o ನಡುವೆ ಇತ್ತು. ಉತ್ತರ–ದಕ್ಷಿಣವಾಗಿ ಜಿಲ್ಲೆಯು ಗರಿಷ್ಠ 85 ಮೈಲಿಗಳು ಮತ್ತು ಪೂರ್ವ–ಪಶ್ಚಿಮವಾಗಿ 100 ಮೈಲಿಗಳಷ್ಟಿತ್ತು. ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ, ಆಗ್ನೇಯದಲ್ಲಿ ತುಮಕೂರು ಜಿಲ್ಲೆ, ನೈಋತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ, ವಾಯುವ್ಯದಲ್ಲಿ ಧಾರವಾಡ ಜಿಲ್ಲೆ–ಇವು ಮೇರೆಗಳಾಗಿದ್ದವು. ಇದರ ವಿಸ್ತೀರ್ಣ 4,170.9 ಚ.ಮೈ ಅಂದರೆ 10,802.6 ಚ.ಕಿ.ಮೀ ಗಳಷ್ಟಿತ್ತು. ಜನಸಂಖ್ಯೆಯು 13,97,181 (1971) ಮತ್ತು 1,659,456 (2011) ಆಗಿತ್ತು.

**ಐತಿಹಾಸಿಕ ಹಿನ್ನೆಲೆ:**

ಚಿತ್ರದುರ್ಗವು ಡೆಕ್ಕನ್ ಪ್ರಸ್ಥಭೂಮಿಯ ಹೃದಯ ಭಾಗದಲ್ಲಿದ್ದು ಈ ಜಿಲ್ಲೆಯು ಶೌರ್ಯ ಮತ್ತು ಪರಾಕ್ರಮಕ್ಕೆ ಹೆಸರಾಗಿದೆ. ಮೂಲತಃ ಈ ನಗರಕ್ಕೆ ಚಿತ್ರಕಲ್ಲು ದುರ್ಗ, ಚಿನ್ಮೂಲಾದ್ರಿ, ಚಿಂತಲಕಲದುರ್ಗ, ಚಿಂತಲಕಲ್ಲು ದುರ್ಗ, ಟಿಪ್ಪುಸುಲ್ತಾನನ ಕಾಲದಲ್ಲಿ ಫರ್ರಕ್ಕಾಬಾದ್ ಎಂದು ಮತ್ತು ಬ್ರಿಟಿಷರ ಕಾಲದಲ್ಲಿ ಚಿಟಲುಡ್ರಗ್ ಎಂದು ಹೆಸರಿತ್ತು. ಪ್ರಸ್ತುತ ಚಿತ್ರದುರ್ಗ ಎಂದು ಕರೆಯಲ್ಪಡುತ್ತದೆ. 2012 ರಲ್ಲಿ ಜಿಲ್ಲೆಯ ಕೂನಬೇವು ಗ್ರಾಮದಲ್ಲಿ ದೊರೆತ ಶಿಲಾಯುಗ ಕಾಲದ ಕಲ್ಲಿನ ಆಯುಧಗಳು ಜಿಲ್ಲೆಯ ಐತಿಹಾಸಿಕತೆಯನ್ನು ಸಾ.ಶ.ಪೂ. 6,000 ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ಯುತ್ತದೆ ಎಂದು ಕನ್ನಡ ವಿ.ವಿ.ಯ ಪುರಾತತ್ವ ವಿಭಾಗದ ವಿದ್ವಾಂಸರಾದ ಡಾ. ಎಸ್. ವೈ. ಸೋಮಶೇಖರ್ ಅವರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ ಇತ್ತೀಚಿಗೆ ಬ್ರಹ್ಮಗಿರಿ ಪರಿಸರದಲ್ಲಿ ಮೌರ್ಯಪೂರ್ವ ಮತ್ತು ಮೌರ್ಯೋತ್ತರ ಕಾಲದ ನಗರ ಜೀವನದ ಬಗ್ಗೆ ತಿಳಿಯಲು ಹೆಚ್ಚಿನ ಉತ್ಖನನಗಳು ನಡೆಯುತ್ತಿವೆ. ಪ್ರಸ್ತುತ ಉಪಲಬ್ಧ ಮೊಳಕಾಲ್ಮೂರು ತಾಲ್ಲೂಕು ಬ್ರಹ್ಮಗಿರಿ ಸಮೀಪ ದೊರೆತಿರುವ ಅಶೋಕನ ಕಾಲದ ಶಿಲಾಶಾಸನದ ಪ್ರಕಾರ ಚಿತ್ರದುರ್ಗವು ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತು. ಮೌರ್ಯ ಸಾಮ್ರಾಜ್ಯವು ಪತನಗೊಂಡ ನಂತರ ಶಾತವಾಹನರು, ಪಲ್ಲವರು, ಚುಟುಗಳು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. 14ನೇ ಶತಮಾನದಲ್ಲಿ ವಿಜಯನಗರ ಅರಸರ ಆಳ್ವಿಕೆಯಲ್ಲಿದ್ದು 1565 ರಲ್ಲಿ ನಡೆದ ತಾಳಿಕೋಟೆ ಯುದ್ಧದ ನಂತರ ಚಿತ್ರದುರ್ಗದ ಪಾಳೆಯಗಾರರು ಈ ಭಾಗದಲ್ಲಿ ಸ್ವತಂತ್ರ ಆಳ್ವಿಕೆ ನಡೆಸಿದರು. 1779 ರಲ್ಲಿ ಚಿತ್ರದುರ್ಗದ ಕೋಟೆಯನ್ನು ಹೈದರಾಲಿ ವಶಪಡಿಸಿಕೊಂಡು ತನ್ನ ಅಧಿಕಾರ ಸ್ಥಾಪಿಸಿದನು. ಬ್ರಿಟಿಷರಿಂದ ಟಿಪ್ಪುಸುಲ್ತಾನ್ ಸೋಲನ್ನು ಅನುಭವಿಸಿದ ನಂತರ ಕೋಟೆಯು ಯದು ವಂಶದ ಆಡಳಿತದ ವ್ಯಾಪ್ತಿಗೆ ಸೇರಲ್ಪಟ್ಟಿತು. ತದನಂತರ ನಗರ ಮತ್ತು ನಂದಿಗ್ರಾಮಗಳ ಆಡಳಿತ ವಿಭಾಗಕ್ಕೆ ಒಳಪಟ್ಟಿದ್ದ ಈ ಜಿಲ್ಲೆಯು 1886 ರಲ್ಲಿ ಸ್ವತಂತ್ರ ಜಿಲ್ಲೆಯಾಗಿ ರೂಪುಗೊಂಡಿತು. 1997ರಲ್ಲಿ ದಾವಣಗೆರೆ ಜಿಲ್ಲೆ ರಚನೆಯಾಗುವವರೆಗೂ 9 ತಾಲ್ಲೂಕುಗಳನ್ನು ಇದು ಒಳಗೊಂಡಿತ್ತು. ಪ್ರಸ್ತುತ 6 ತಾಲ್ಲೂಕುಗಳು ಈ ಜಿಲ್ಲೆಯಲ್ಲಿವೆ.

**ವಸಾಹತು ಭಾರತದಲ್ಲಿ ಆಂಗ್ಲ ಶಿಕ್ಷಣದ ಬೆಳವಣಿಗೆ:**

ಬ್ರಿಟಿಷರು ಭಾರತದಲ್ಲಿ ಅಧಿಕಾರ ಸ್ಥಾಪನೆ ಆರಂಭ ಮಾಡಿದ ಕಾಲದಲ್ಲೇ ಇಲ್ಲಿನ ಸಂಸ್ಕೃತಿ, ಧರ್ಮ, ಶಿಕ್ಷಣ ಮತ್ತು ಸಾಮಾಜಿಕ ಸ್ಥಿತಿ–ಗತಿಗಳ ಅಧ್ಯಯನ ಮಾಡತೊಡಗಿದರು. ಇದರಿಂದ ಅವರು ಇಲ್ಲಿ ತಮ್ಮ ರಾಜಕೀಯ ಅಧಿಕಾರವನ್ನು ಸ್ಥಿರಗೊಳಿಸಿಕೊಳ್ಳಲು

ಪ್ರಯತ್ನಿಸಿದರು. ಅದಕ್ಕಾಗಿ ರಾಯಲ್ ಏಷ್ಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿ (1784) ಇಲ್ಲಿನ ಭಾಷೆ, ಸಾಹಿತ್ಯ ಕೃತಿಗಳು, ಐತಿಹಾಸಿಕ ಅಂಶಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡತೊಡಗಿದರು. ಆರಂಭದಲ್ಲಿ ಅವರ ಚಿಂತನೆಗಳು ಪೌರ್ವಾತ್ಯಪರವಾಗಿದ್ದರೂ ಮುಂದೆ ಅವು ಪಾಶ್ಚಾತ್ಯವಾದಿಗಳ ಪ್ರಭಾವದ ಕಾರಣ ಬದಲಾದವು. ಪರಿಣಾಮವಾಗಿ 1835 ರಲ್ಲಿ ಮೆಕಾಲೆ ನೇತೃತ್ವದಲ್ಲಿ ಆಂಗ್ಲ ಶಿಕ್ಷಣ ಮಾಧ್ಯಮ ಜಾರಿಗೆ ಬಂದಿತು. ಆಗ ಆಂಗ್ಲ ಶಿಕ್ಷಣ ಜಾರಿಗೊಳಿಸಲು ಯೂರೋಪಿನ ಮಿಷನರಿ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಲಾಯಿತು. ಜೊತೆಗೆ ಭಾರತದಲ್ಲಿ ಕ್ರೈಸ್ತ ಮತ ಪ್ರಚಾರಕ್ಕೂ ಬೆಂಬಲ ನೀಡಲಾಯಿತು. ಮುಂದೆ 1854 ರಲ್ಲಿ ವುಡ್ಸ್ ವರದಿಯನ್ನು ಆಧರಿಸಿ ಕಲ್ಕತ್ತಾ, ಮದ್ರಾಸ್ ಮತ್ತು ಮುಂಬೈಗಳಲ್ಲಿ ಇಂಗ್ಲೆಂಡ್ ಮಾದರಿಯಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆಯೂ ಆಯಿತು. ತದನಂತರ ದೇಶೀಯ ಅರಸರೂ ಸಹ ತಮ್ಮ ಸಂಸ್ಥಾನಗಳಲ್ಲಿ ವಿಶ್ವವಿದ್ಯಾಲಯಗಳನ್ನು ಆರಂಭಿಸಿದರು. ಮುಂದೆ 1882 ರಲ್ಲಿ ಹಂಟರ್ ಕಮಿಷನ್, ಭಾರತೀಯ ವಿಶ್ವವಿದ್ಯಾನಿಲಯಗಳ ಕಾಯ್ದೆ (1904), ಸ್ಯಾಡ್‌ಲರ್ ವಿಶ್ವವಿದ್ಯಾನಿಲಯ ಕಾಯಿದೆ (1917–19), ಸರ್ ಫಿಲಿಪ್ ಹಾರ್ಟಗನ್ ಸಮಿತಿ (1929) ಮತ್ತು ಸಾರ್ಜೆಂಟ್ ಯೋಜನೆ (1944)ಗಳ ಮೂಲಕ ಅನೇಕ ಬದಲಾವಣೆಗಳು ಶಿಕ್ಷಣದ ಕ್ಷೇತ್ರದಲ್ಲಿ ಉಂಟಾದವು. ಈ ಕಾಲಘಟ್ಟದಲ್ಲಿ ಭಾರತಕ್ಕೆ ಶಿಕ್ಷಣ ಮತ್ತು ಧಾರ್ಮಿಕ ಪ್ರಚಾರಕ್ಕಾಗಿ ವೆಸ್ಲಿಯನ್ ಮೆಥಾಡಿಸ್ಟ್ ಮಿಷನರಿ ಸೊಸೈಟಿ (WMMS), ಲಂಡನ್ ಮಿಷನರಿ ಸೊಸೈಟಿ (LMS) ಮತ್ತು ಕ್ಯಾಥೊಲಿಕ್ ಮಿಷನ್ಸ್, ಬಾಸೆಲ್ ಮಿಷನ್ ಎಂಬ ಇತ್ಯಾದಿ ಸಂಸ್ಥೆಗಳು ಬಂದವು. ಆರಂಭದಲ್ಲಿ ಮಿಷನರಿ ಶಿಕ್ಷಣ ಸಂಸ್ಥೆಗಳು ಧರ್ಮ ಪ್ರಚಾರದಲ್ಲಿ ತೊಡಗಿದ್ದವು. ನಂತರ ಆಂಗ್ಲ ಶಿಕ್ಷಣದ ಪ್ರಸಾರ, ವಿಜ್ಞಾನ, ಗಣಿತ, ಇತಿಹಾಸ, ಭೂಗೋಳ ಮತ್ತು ಸಮಾಜ ವಿಜ್ಞಾನಗಳಂತಹ ವಿಷಯಗಳ ಪರಿಚಯ ಮಾಡಿದವು. ಅಲ್ಲದೇ ಮುದ್ರಣಾಲಯಗಳ ಸ್ಥಾಪನೆ, ಪತ್ರಿಕೆಗಳ ಪ್ರಸಾರ, ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ಮತ್ತು ಮೂಢನಂಬಿಕೆಗಳ ವಿರುದ್ಧ ಜಾಗೃತಿ – ಇವೇ ಮೊದಲಾದ ಕಾರ್ಯಗಳ ಮೂಲಕ ಸಾಮಾಜಿಕ ಸಂಸ್ಥೆಗಳಾಗಿ ಬೆಳೆದವು.

**ಚಿತ್ರದುರ್ಗ ಜಿಲ್ಲೆಯಲ್ಲಿ ಮಿಷನರಿ ಶಿಕ್ಷಣದ ಸ್ವರೂಪ:**

ಜಿಲ್ಲೆಯು ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಅವರ ಉದಾರ ಆಡಳಿತ ನೀತಿಯ ಕಾರಣದಿಂದಾಗಿ ಮೈಸೂರು, ಬೆಂಗಳೂರು, ತುಮಕೂರು, ಹಾಸನಗಳ ನಂತರ ಇಲ್ಲಿ ಮಿಷನರಿಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಿದರು. 19ನೇ ಶತಮಾನದ ಉತ್ತರಾರ್ಧ ಅಥವಾ 20ನೇ ಶತಮಾನದ ಆದಿಭಾಗದಲ್ಲಿ ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕುಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಅಲ್ಲದೇ ವಸತಿ ಶಾಲೆಗಳು ಆರಂಭವಾದವು. ಇವುಗಳಲ್ಲಿ ಕೆಲವು ತಾತ್ಕಾಲಿಕವಾಗಿಯೂ ಕಾರ್ಯ ನಿರ್ವಹಿಸುತ್ತಿದ್ದವು. ಏಕೆಂದರೆ ಕ್ರೈಸ್ತ ಪಾದ್ರಿಗಳು ಬಂದಾಗ ಆ ಶಾಲೆಗಳು ಕಾರ್ಯ ನಿರ್ವಹಿಸುತ್ತಿದ್ದವು. ಅವರು ಬೇರೆಡೆಗೆ ಹೋದಾಗ ಅವು ತಾತ್ಕಾಲಿಕವಾಗಿ ಸ್ಥಗಿತಗೊಳ್ಳುತ್ತಿದ್ದವು. ಮುಂದೆ ಅವುಗಳು ಹೊಳಲ್ಕೆರೆ, ಜಗಳೂರು, ಮೊಳಕಾಲ್ಮೂರು ಮತ್ತು ಹಿರಿಯೂರುಗಳಂತಹ ತಾಲ್ಲೂಕುಗಳಲ್ಲದೇ ಹೋಬಳಿ ಕೇಂದ್ರಗಳು ಮತ್ತು ಸಣ್ಣ ಊರುಗಳಿಗೂ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿದವು. ಈ ಶಾಲೆಗಳಲ್ಲಿ ಮೇಲ್ವರ್ಗದವರಲ್ಲದೇ ಇನ್ನುಳಿದ ಜಾತಿ–ಸಮುದಾಯಗಳ ವಿದ್ಯಾರ್ಥಿಗಳೂ ಶಿಕ್ಷಣ ಪಡೆಯಬಹುದಾಗಿತ್ತು. ಮೈಸೂರು ಪ್ರಾಂತ್ಯದ ಮೈಸೂರು ನಗರ, ಬೆಂಗಳೂರು ಮತ್ತು ತುಮಕೂರುಗಳಿಗೆ ಹೋಲಿಸಿದರೆ ಚಿತ್ರದುರ್ಗವು ಮಿಷನರಿಗಳ ನೇರ ಚಟುವಟಿಕೆಗಳಿಗೆ ಅಷ್ಟಾಗಿ ಒಳಗಾಗಲಿಲ್ಲ. ಆದರೂ ನೆರೆಯ ಜಿಲ್ಲೆಗಳ ಪ್ರಭಾವದ ಕಾರಣ ಕಡಿಮೆ ಸಂಖ್ಯೆಯ ಮಿಷನರಿ

ಶಾಲೆಗಳು ಜಿಲ್ಲೆಯಾದ್ಯಂತ ಕಾರ್ಯ ನಿರ್ವಹಿಸಿದವು. ಈ ಶಾಲೆಗಳಲ್ಲದೇ ಸಾಂಪ್ರದಾಯಿಕ ಶಾಲೆಗಳು, ಮಕ್ತಬ್‌ಗಳು, ಸಂಸ್ಕೃತ ಪಾಠಶಾಲೆಗಳು ಸಹಾ ಶಿಕ್ಷಣ ನೀಡುವಲ್ಲಿ ನಿರತವಾಗಿದ್ದವು. ಮುಂದೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಪ್ರಾಥಮಿಕ ಶಾಲೆಗಳ ಶುಲ್ಕವನ್ನು ರದ್ದುಗೊಳಿಸಲಾಯಿತು. ವಿಶ್ವೇಶ್ವರಯ್ಯನವರು ತಮ್ಮ ಕಾಲದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ದಿವಾನರಾಗಿದ್ದ ಕಾಂತರಾಜ ಅರಸು ಅವರ ಕಾಲದಲ್ಲಿ ಮಾಧ್ಯಮಿಕ ಶಾಲೆಗಳ ಪ್ರವೇಶ ಶುಲ್ಕವನ್ನೂ ರದ್ದುಗೊಳಿಸಲಾಯಿತು. ಇದರಿಂದ ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಮತ್ತಷ್ಟು ಪ್ರೋತ್ಸಾಹ ದೊರೆಯಿತು.

**ತಾಲ್ಲೂಕುವಾರು ಶಾಲೆಗಳ ಪಟ್ಟಿ**

| **ತಾಲ್ಲೂಕು** | **ಮಿಷನರಿ ಸಂಸ್ಥೆ** | **ಶಾಲೆಗಳ ಸಂಖ್ಯೆ** | **ಕಾಲಾವಧಿ** |
|---|---|---|---|
| ಚಿತ್ರದುರ್ಗ | WMMS, LMS, Catholic | 5–7 | 1868–1940 |
| ಹಿರಿಯೂರು | WMMS, LMS, Catholic | 4–6 | 1875–1930 |
| ಹೊಳಲ್ಕೆರೆ | WMMS, LMS | 3–5 | 1880–1940 |
| ಚಳ್ಳಕೆರೆ | LMS (major), WMMS | 4–5 | 1880–1940 |
| ಹೊಸದುರ್ಗ | WMMS, Catholic | 2–3 | 1885–1940 |
| ಮೊಳಕಾಲ್ಮೂರು | LMS (major) | 3–4 | 1878–1935 |
| ಜಗಳೂರು | WMMS, LMS | 1–2 | 1890–1935 |
| ದಾವಣಗೆರೆ | – | – | – |
| ಹರಿಹರ | – | – | – |

WMMS: Wesleyan Methodist Missionary Society.

LMS: London Missionary Society.

ಇವುಗಳು ದೂರದ ಬೆಂಗಳೂರು, ತುಮಕೂರು ಮತ್ತು ಬಳ್ಳಾರಿಗಳಲ್ಲಿ ತಮ್ಮ ಪ್ರಧಾನ ಕಛೇರಿಗಳನ್ನು ಹೊಂದಿದ್ದವು.

**ಮಿಷನರಿ ಶಿಕ್ಷಣದ ಪ್ರಭಾವ:**

ಜಿಲ್ಲೆಯಲ್ಲಿ ಪರಿಚಯವಾದ ಮಿಷನರಿ ಶಿಕ್ಷಣವು ಶೈಕ್ಷಣಿಕ ಕ್ಷೇತ್ರ, ತುಳಿತಕ್ಕೊಳಗಾದವರ ಸಾಮಾಜಿಕ ಸ್ತರ ಬದಲಾವಣೆ, ನೂತನ ಮಧ್ಯಮವರ್ಗದ ಏಳಿಗೆ, ವೃತ್ತಿ ಕೌಶಲ್ಯಗಳ ಬೆಳವಣಿಗೆ, ಅನಾಥರು ಮತ್ತು ಮಹಿಳೆಯರ ಶಿಕ್ಷಣ, ಆರ್ಥಿಕ ಪರಿಸ್ಥಿತಿಗಳ ಸುಧಾರಣೆ ಮತ್ತು ಮುದ್ರಣ ಪ್ರಚಾರದಂತಹ ಕ್ಷೇತ್ರಗಳಲ್ಲಿ ಗಮನಾರ್ಹ ಬದಲಾವಣೆಗೆ ಕಾರಣವಾದವು.

- **ಶಾಲೆಗಳ ಗುಣಮಟ್ಟದಲ್ಲಿ ಸುಧಾರಣೆ:** ಕಾಲ-ಕಾಲಕ್ಕೆ ಬದಲಾಗುತ್ತಿದ್ದ ಪಠ್ಯಕ್ರಮಕ್ಕೆ ಅನುಸಾರವಾಗಿ ಮಿಷನರಿ ಶಾಲೆಗಳು ತಮ್ಮ ಬೋಧನಾ ವಿಧಾನ ಮತ್ತು ಪಠ್ಯಪುಸ್ತಕಗಳನ್ನೂ ಸಹ ಬದಲಾಯಿಸುತ್ತಿದ್ದವು. ಇದರಿಂದ 19ನೇ ಶತಮಾನದ ಕೊನೆಯ ವೇಳೆಗೆ ಸಣ್ಣದಾದರೂ ಕಲಿತ ವರ್ಗವೊಂದು ಜಿಲ್ಲೆಯಲ್ಲಿ ಒಡಮೂಡಿತು. ಮಿಷನರಿಗಳು ತಮ್ಮ ಶಾಲೆಗಳಲ್ಲಿ ಬೋಧಿಸುವ ಶಿಕ್ಷಕರಿಗೆ ಬೋಧನಾವಿಧಾನ, ಶಿಸ್ತು ಮತ್ತು ಶಾಲಾ ಆಡಳಿತದ ಬಗ್ಗೆ ಸೂಕ್ತ ತರಬೇತಿ ಒದಗಿಸಿದ್ದರಿಂದ ಅನೇಕ ಶಿಕ್ಷಕರು

ಮುಂದೆ ಜಿಲ್ಲೆಯ ಬೇರೆ-ಬೇರೆ ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳಲ್ಲಿ ಕೆಲಸ ನಿರ್ವಹಿಸಿದರು. ಅವರಿಗೆ ನೀಡಿದ ತರಬೇತಿಯಿಂದಾಗಿ ಶಾಲೆಗಳಲ್ಲಿ ನಿಗದಿತ ವೇಳಾಪಟ್ಟಿ, ಬ್ಲಾಕ್‌ಬೋರ್ಡ್ ಕೌಶಲ್ಯ, ಪಠ್ಯಕ್ರಮದ ಕ್ರಮಬದ್ಧವಾದ ಕಲಿಕೆ, ಪರೀಕ್ಷೆ ಮತ್ತು ಉತ್ತೀರ್ಣರಾದವರಿಗೆ ಪ್ರಮಾಣಪತ್ರಗಳ ವಿತರಣೆಗಳಂತಹ ನೂತನ ಪದ್ಧತಿಗಳು ಜಾರಿಗೆ ಬಂದವು. ಮಿಷನರಿ ಶಾಲೆಗಳಲ್ಲಿ ಸಂಸ್ಕೃತ ಪಾಠಶಾಲೆಗಳಂತಲ್ಲದೆ ದೇಶೀ ಭಾಷೆಗಳಾದ ಕನ್ನಡ, ತೆಲುಗು ಭಾಷೆಗಳಲ್ಲಿ ಬೋಧನೆ ನಡೆಯುತ್ತಿದ್ದರಿಂದ ಶಾಲೆಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಯಿತು.

- **ತುಳಿತಕ್ಕೊಳಗಾದವರ ಸಬಲೀಕರಣ:** ಈ ಶಾಲೆಗಳು ಬಹುಕಾಲದವರೆಗೂ ಬ್ರಾಹ್ಮಣ ಶಿಕ್ಷಣದಿಂದ ಹೊರಗುಳಿದಿದ್ದ ದಲಿತರು, ಅಸ್ಪೃಶ್ಯರು ಮತ್ತು ಹುಡುಗಿಯರಿಗೆ ಶಿಕ್ಷಣ ನೀಡಿದ್ದರಿಂದ ಜಿಲ್ಲೆಯ ಬಹುಸಂಖ್ಯೆಯ ವಿದ್ಯಾರ್ಥಿಗಳಿಗೆ ಆರಂಭಿಕ ಶಿಕ್ಷಣ ನೀಡುವಲ್ಲಿ ಬಹುಮುಖ್ಯ ಪಾತ್ರವಹಿಸಿದವು. ಅಸ್ಪೃಶ್ಯರು ಮತ್ತು ಶಿಕ್ಷಣದಿಂದ ವಂಚಿತರಾದವರಿಗೆ ಶಿಕ್ಷಣ ದೊರೆತಿದ್ದರಿಂದ ಆ ಸಮುದಾಯಗಳಲ್ಲಿ ಪ್ರಥಮ ಪೀಳಿಗೆಯ ವಿದ್ಯಾವಂತ ವರ್ಗದ ಉದಯವಾಯಿತು. ಸೀಮಿತವಾದರೂ ಸಾಮಾಜಿಕ ಚಲನೆ ಅಂದರೆ ಅಂತಸ್ತು ಬದಲಾವಣೆಗೆ ಕಾರಣವಾಗಿದ್ದಷ್ಟೇ ಅಲ್ಲ, ತುಳಿತಕ್ಕೊಳಗಾದವರು ಶಿಕ್ಷಣ ಪಡೆಯಲು ಪರಂಪರಾಗತವಾಗಿದ್ದ ತಡೆಗೋಡೆಯನ್ನು ನಿರ್ಮೂಲ ಮಾಡುವಲ್ಲಿ ಮಿಷನರಿಗಳು ಯಶಸ್ವಿಯಾದರು. ಇದು ಮುಂದೆ ಸಾಮಾಜಿಕ ಚಳವಳಿಗಳಿಗೆ ಕಾರಣವಾಗಿದ್ದಷ್ಟೇ ಅಲ್ಲ, ಆಂಗ್ಲರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಜಿಲ್ಲೆಯ ಜನತೆ ಸಿದ್ಧವಾಗಲು ಕಾರಣವಾಯಿತು. ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗುಗಳ ನಿವಾರಣೆಗೂ ಇದು ಸಹಕಾರಿಯಾಯಿತು.
- **ಮಹಿಳಾ ಶಿಕ್ಷಣದ ಪ್ರಸಾರ:** ಮುಮ್ಮಡಿ ಕೃಷ್ಣರಾಜ ಒಡೆಯರು 1833 ರಷ್ಟು ಹಿಂದೆಯೇ ಅರಮನೆಯ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಶಾಲೆಯನ್ನು ತೆರೆದಿದ್ದರು. ಇದು ಮುಂದೆ ಸಾರ್ವಜನಿಕರ ಉಪಯೋಗಕ್ಕೂ ಮುಕ್ತವಾಯಿತು. ಹೀಗೆ ಸಂಸ್ಥಾನದಲ್ಲಿ ಆರಂಭವಾದ ಬಾಲಕಿಯರ ಶಿಕ್ಷಣ ಸೌಲಭ್ಯವು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸಿದ ಮಿಷನರಿಗಳ ಮೂಲಕ ಸ್ಥಳೀಯ ಬಾಲಕಿಯರು ಮತ್ತು ಮಹಿಳೆಯರಿಗೂ ದೊರೆಯುವಂತಾಯಿತು. ಮಹಿಳೆಯರಿಗೆ ಹೊಲಿಗೆ, ಗೃಹ ವಿಜ್ಞಾನಗಳಂತಹ ವೃತ್ತಿಕೌಶಲ್ಯಗಳನ್ನೂ ಸಹ ಕಲಿಸಲಾಗುತ್ತಿತ್ತು. ಅನಾಥ ಮತ್ತು ಆರ್ಥಿಕವಾಗಿ ಹಿಂದುಳಿದ ಬಾಲಕಿಯರಿಗೆ ವಸತಿ ಶಾಲೆಗಳನ್ನು ಆರಂಭಿಸಲಾಯಿತು. ಇಂತಹ ಪ್ರಯತ್ನಗಳು ದೊಡ್ಡ ಮಟ್ಟದಲ್ಲಿ ನಡೆಯದಿದ್ದರೂ, ಮಿಷನರಿಗಳು ಅನುಸರಿಸಿದ ಪ್ರಚಾರ ತಂತ್ರಗಳ ಕಾರಣದಿಂದಾಗಿ ಅಧಿಕ ಸಂಖ್ಯೆಯ ಹೆಣ್ಣುಮಕ್ಕಳು ಶಿಕ್ಷಣ ಪಡೆಯಲು ಸಾಧ್ಯವಾಯಿತು.
- **ಮುದ್ರಣ ಮಾಧ್ಯಮದ ಪ್ರಸಾರ:** ಮಿಷನರಿ ಶಾಲೆಗಳಲ್ಲಿ ಕನ್ನಡದಲ್ಲಿ ಮೂಲಶಿಕ್ಷಣದ ಜೊತೆಗೆ ಗಣಿತ, ಭೂಗೋಳ, ಬೈಬಲ್ ಆಧಾರಿತ ನೈತಿಕತೆಗಳನ್ನು ಮುದ್ರಿತ ಪಠ್ಯಪುಸ್ತಕಗಳನ್ನು ಬಳಸಿ ಬೋಧಿಸಲಾಗುತ್ತಿತ್ತು. ಇದು ಈ ಹಿಂದಿನ ಮೌಖಿಕ ಪರಂಪರೆಗಿಂತ ಭಿನ್ನವಾಗಿತ್ತು. ಇದರಿಂದ ಜಿಲ್ಲೆಯಲ್ಲಿ ಮುದ್ರಣ ಮಾಧ್ಯಮದ ಪರಿಚಯವಾಯಿತು. ಜೊತೆಗೆ ಇನ್ನಿತರ ಶಿಕ್ಷಣ ಸಂಸ್ಥೆಗಳೂ ಮುದ್ರಿತ ಪುಸ್ತಕಗಳ ಬಳಕೆಗೆ ಮೊದಲು ಮಾಡಿದವು. ಈ ಶಾಲೆಗಳು ಮುಂದೆ ಮೈಸೂರು ಪಠ್ಯಪುಸ್ತಕ ಸಮಿತಿಯು ಮುದ್ರಿತ ಪುಸ್ತಕಗಳನ್ನು ಒದಗಿಸುವವರೆಗೂ ಮಿಷನರಿಗಳು ನೀಡುತ್ತಿದ್ದ ಮುದ್ರಿತ ಪುಸ್ತಕಗಳನ್ನೇ ಬಳಸುತ್ತಿದ್ದವು.

- **ಶಿಕ್ಷಣ ಕ್ಷೇತ್ರದ ಬೆಳವಣಿಗೆ:** ಮೈಸೂರು ಅರಸರು ಮಿಷನರಿಗಳ ಮತಪ್ರಚಾರದ ವಿಚಾರದಲ್ಲಿ ಎಚ್ಚರಿಕೆಯಿಂದ ಇದ್ದರೂ, ಆ ಶಾಲೆಗಳು ನಿಗದಿತ ಪಠ್ಯಕ್ರಮದ ಅನುಸರಣೆ ಮತ್ತು ಪ್ರಗತಿ ಪರಿಶೀಲನಾ ವರದಿಗಳನ್ನು ಸಲ್ಲಿಸುವ ಮೂಲಕ ಸರ್ಕಾರದೊಂದಿಗೆ ಆಡಳಿತಾತ್ಮಕವಾಗಿ ಸೌಹಾರ್ದಯುತ ಸಂಬಂಧವನ್ನೇ ಹೊಂದಿದ್ದವು. ಅಲ್ಲದೇ ಪರೋಕ್ಷವಾಗಿ ಮಿಷನರಿಗಳ ಚಟುವಟಿಕೆಗಳು ಜಿಲ್ಲೆಯ ಶಿಕ್ಷಣ ಅಭಿವೃದ್ಧಿಗೂ ಕಾರಣವಾಯಿತು. ಏಕೆಂದರೆ ಮಿಷನರಿಗಳು ಆರಂಭಿಸಿದ ಶಾಲೆಗಳ ಕಾರಣದಿಂದಾಗಿ ಮೈಸೂರು ಸರ್ಕಾರವು ಜಿಲ್ಲೆಯ ವಿವಿಧ ತಾಲ್ಲೂಕು, ಹೋಬಳಿ ಮತ್ತು ಗ್ರಾಮಗಳಲ್ಲಿ ಸರ್ಕಾರಿ ಶಾಲೆಗಳನ್ನು ತೆರೆಯುವ ಅನಿವಾರ್ಯತೆಗೆ ಒಳಗಾಯಿತು. ಶಿಕ್ಷಕರ ತರಬೇತಿಗೆ ಕ್ರಮ ವಹಿಸಿದ್ದಲ್ಲದೇ ಶಾಲಾ ಅನುದಾನದಲ್ಲಿಯೂ ಹೆಚ್ಚಳವನ್ನು ಮಾಡಿತು. ಪರಿಣಾಮವಾಗಿ 20ನೆ ಶತಮಾನದ ನಂತರ ಜಿಲ್ಲೆಯಲ್ಲಿ ಶಿಕ್ಷಣ ಚಟುವಟಿಕೆಗಳು ಅಧಿಕಗೊಂಡವು.
- **ಮಧ್ಯಮವರ್ಗದ ಉದಯ:** ಆಂಗ್ಲಭಾಷೆಯ ಬೋಧನೆಯನ್ನು ಬೈಬಲ್ ಸಾಹಿತ್ಯ ಅಭ್ಯಸಿಸಲು ಪ್ರಮುಖವಾಗಿ ಬಳಸಿದರೂ ಆ ಭಾಷಾ ಜ್ಞಾನವು ಕೆಳದರ್ಜೆಯ ನೌಕರಿಗಳನ್ನು ಹೊಂದುವಲ್ಲಿ ಅನೇಕರಿಗೆ ಉಪಯುಕ್ತವಾಯಿತು. ತುಮಕೂರು, ಬೆಂಗಳೂರು, ಮೈಸೂರು ಮತ್ತು ಬಳ್ಳಾರಿಗಳಲ್ಲಿದ್ದ ಉನ್ನತ ಶಿಕ್ಷಣ ಪಡೆಯುವಲ್ಲಿ ಸಹಾ ಆಂಗ್ಲಭಾಷಾ ಜ್ಞಾನವು ಸಹಕಾರಿಯಾಯಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದವರು ಮುಂದೆ ಉನ್ನತ ಶಿಕ್ಷಣ ಪಡೆದರು. ಇದರಿಂದ ಅವರು ಸರ್ಕಾರದ ಶಿಕ್ಷಣ, ಕಂದಾಯ ಮತ್ತು ನ್ಯಾಯಾಂಗದಂತಹ ಇಲಾಖೆಗಳಲ್ಲಿ ಶಿಕ್ಷಕರು, ಗುಮಾಸ್ತರು, ಕಂದಾಯ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಯಿತು. ಇದರಿಂದ ಕಲಿತ ಮಧ್ಯಮವರ್ಗದ ಏಳಿಗೆ ಆಯಿತು. ಇದು ಸಾಮಾಜಿಕವಾಗಿ ಮೇಲುಸ್ತರದ ಚಲನೆಗೂ ಕಾರಣವಾಯಿತು.
- **ಪಾಶ್ಚಾತ್ಯ ಮೌಲ್ಯಗಳ ಪರಿಚಯ:** ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ವೈಜ್ಞಾನಿಕ ಚಿಂತನಾ ಕ್ರಮ ಇವೇ ಮೊದಲಾದ ಮೌಲ್ಯಗಳು ಶಿಕ್ಷಣ ಪಡೆದವರಲ್ಲಿ ಬೆಳೆಯಲು ಕಾರಣವಾಯಿತು. ಮುಂದೆ ಇದು ಸಮಾಜದಲ್ಲಿದ್ದ ಅನೇಕ ಪಿಡುಗುಗಳ ನಿರ್ಮೂಲನೆಗೂ ಕಾರಣವಾಯಿತು. ಆದರೆ ಇದು ಸಂಪ್ರದಾಯವಾದಿಗಳು ಮತ್ತು ಪ್ರಗತಿಪರರ ನಡುವಿನ ಧಾರ್ಮಿಕ ಮತ್ತು ಜಾತೀಯವಾದದ ಸಂಘರ್ಷಗಳಿಗೂ ಕಾರಣವಾಯಿತು.

**ಮಿಷನರಿ ಶಿಕ್ಷಣದ ಮೇಲಿನ ಟೀಕೆಗಳು:**

ಮಿಷನರಿ ಶಿಕ್ಷಣವು ಅನೇಕ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಬದಲಾವಣೆಗೆ ಕಾರಣವಾದರೂ ಅದು ಟೀಕೆಗಳಿಂದ ಹೊರತಾಗಿರಲಿಲ್ಲ. ಮಿಷನರಿಗಳು ಮತಾಂತರದಲ್ಲಿ ತೊಡಗಿದ್ದವು. ದೇಶೀಯ ಜ್ಞಾನವ್ಯವಸ್ಥೆಯನ್ನು ತಿರಸ್ಕರಿಸಿದ್ದಲ್ಲದೇ ಪಾಶ್ಚಾತ್ಯ ಸಂಸ್ಕೃತಿಯನ್ನು ಹರಡಿದವು. ಜಿಲ್ಲೆಯ ಭೌಗೋಳಿಕ ವಿಸ್ತಾರ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಅಗತ್ಯವಿದ್ದಷ್ಟು ಸಂಖ್ಯೆಯ ಶಾಲೆಗಳನ್ನು ತೆರೆಯಲಿಲ್ಲ.

**ಉಪಸಂಹಾರ:**

ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಪ್ರಾಚೀನ ಅರಸು ಮನೆತನದ ಆಳ್ವಿಕೆಗೆ ಒಳಗಾದ ಚಿತ್ರದುರ್ಗ ಜಿಲ್ಲೆಯು ರಾಜಕೀಯವಾಗಿ ಅನೇಕ ಸ್ಥಿತ್ಯಂತರಗಳಿಗೆ ಒಳಗಾಯಿತು. ಪಾಶ್ಚಾತ್ಯ ಶಿಕ್ಷಣದ ಅನುಷ್ಠಾನದ ನಂತರ ಕರಾವಳಿ, ಮದ್ರಾಸು ಪ್ರಾಂತ್ಯಗಳಲ್ಲಿ

ಆರಂಭವಾದ ಮಿಷನರಿ ಚಟುವಟಿಕೆಗಳು ಮೈಸೂರು ಪ್ರಾಂತ್ಯವನ್ನೂ ಪ್ರವೇಶಿಸಿದವು. ಆದರೆ ಮೈಸೂರು, ಬೆಂಗಳೂರು, ತುಮಕೂರು ಮತ್ತು ಹಾಸನ ಜಿಲ್ಲೆಗಳಷ್ಟು ವ್ಯಾಪಕ ಸ್ವರೂಪದ ಶೈಕ್ಷಣಿಕ ಚಟುವಟಿಕೆಗಳು ನಡೆಯದಿದ್ದರೂ ಸೀಮಿತವಾದ ಶಿಕ್ಷಣ ಸವಲತ್ತುಗಳ ಮೂಲಕ ಜಿಲ್ಲೆಯ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳ ಪ್ರಗತಿಗೆ ಕಾರಣವಾಯಿತು. ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿನ ಸಣ್ಣ ಪ್ರಮಾಣದ ಸಂಘರ್ಷಗಳಿಗೆ ಈ ಶಿಕ್ಷಣವು ಕಾರಣವಾದರೂ ಕಾಲಾಂತರದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ದಲಿತರು, ಹಿಂದುಳಿದವರು, ಅಸ್ಪೃಶ್ಯರು, ಹೆಣ್ಣುಮಕ್ಕಳ ಸಾಮಾಜೀಕರಣಕ್ಕೆ ಮಹತ್ವದ ಕೊಡುಗೆ ನೀಡಿತು. ಮೈಸೂರು ಸರ್ಕಾರದ ಅನುದಾನ ಪಡೆಯುವುದರೊಂದಿಗೆ ಸರ್ಕಾರದೊಂದಿಗೆ ಉತ್ತಮ ಸಂಬಂಧಗಳನ್ನು ಮಿಷನರಿ ಶಾಲೆಗಳು ಹೊಂದಿದ್ದವು. ಮಧ್ಯಮವರ್ಗದ ಏಳಿಗೆ, ಸಾಮಾಜಿಕ ಚಲನೆ ಮತ್ತು ರಾಜಕೀಯ ಚಟುವಟಿಕೆಗಳಿಗೂ ಕಾರಣವಾದ ಮಿಷನರಿಗಳು ಆಧುನಿಕ ಚಿತ್ರದುರ್ಗ ಜಿಲ್ಲೆ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.

**ಪರಾಮರ್ಶನ ಗ್ರಂಥಗಳು:**


1. ಕರ್ನಾಟಕ ಸರ್ಕಾರ / ಮೈಸೂರು ವಿಶ್ವವಿದ್ಯಾಲಯ, ಹಿಸ್ಟರಿ ಆಫ್ ಚಿತ್ರದುರ್ಗ ಡಿಸ್ಟ್ರಿಕ್ಟ್ (ಮೈಸೂರು ವಿಶ್ವವಿದ್ಯಾಲಯ ವಿಶ್ವಕೋಶ), ಮೈಸೂರು: ಮೈಸೂರು ವಿಶ್ವವಿದ್ಯಾಲಯ.
2. ಚಿನ್ನಸ್ವಾಮಿ ಸೋಸಲೆ, ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಪೂರ್ಣಿಮಾ ವಿ., (2018), ಮೈಸೂರು ಸಂಸ್ಥಾನದ ಒಡೆಯರ ಆಳ್ವಿಕೆಯ ಶಿಕ್ಷಣ ವ್ಯವಸ್ಥೆ–ಒಂದು ಪರಿವೀಕ್ಷಣೆ, ಇಂಟರ್ನ್ಯಾಷನಲ್ ಜರ್ನಲ್ ಆಫ್ ಕನ್ನಡ ರಿಸರ್ಚ್.
4. ಸುಬ್ರಹ್ಮಣ್ಯ ಕೆ. ವಿ., (1999), ಕ್ರಿಶ್ಚಿಯನ್ ಮಿಷನ್ಸ್ ಇನ್ ಕರ್ನಾಟಕ (1800–1900), ಬೆಂಗಳೂರು: ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ.
5. ಶ್ರೀನಿವಾಸಾಚಾರಿ ಕೆ., (1968), ಹಿಸ್ಟರಿ ಆಫ್ ಎಜುಕೇಶನ್ ಇನ್ ಮೈಸೂರು ಸ್ಟೇಟ್ (1800–1900), ಮೈಸೂರು: ಮೈಸೂರು ಯೂನಿವರ್ಸಿಟಿ ಪ್ರೆಸ್.
6. ಮೈಸೂರು ಅಡ್ಮಿನಿಸ್ಟ್ರೇಟಿವ್ ಸೆಕ್ರೆಟರಿಯೇಟ್, (1887), ಗ್ರಾಂಟ್–ಇನ್–ಏಡ್ ರೂಲ್ಸ್ ಫಾರ್ ಮಿಷನ್ ಅಂಡ್ ಪ್ರೈವೇಟ್ ಸ್ಕೂಲ್ಸ್, ಮೈಸೂರು: (ಪ್ರಕಾಶಕರ ಹೆಸರು ಲಭ್ಯವಿಲ್ಲ – ಸರ್ಕಾರಿ ದಾಖಲೆ).
7. ಕೃಷ್ಣರಾವ್ ವಿ. ಎಸ್., (1971), ದಿ ಮಾಡರ್ನೈಸೇಷನ್ ಆಫ್ ಮೈಸೂರು ಸ್ಟೇಟ್, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
8. ಇತಿಹಾಸ ವಿಭಾಗ (ಮೈಸೂರು ವಿಶ್ವವಿದ್ಯಾಲಯ), (1995), ರೀಜನಲ್ ಸ್ಟಡೀಸ್ ಆಫ್ ಚಿತ್ರದುರ್ಗ (ಮೊನೊಗ್ರಾಫ್ ಸರಣಿ ನಂ. 12), ಮೈಸೂರು: ಮೈಸೂರು ವಿಶ್ವವಿದ್ಯಾಲಯ.